ಸಂಘಕ್ಕೆ ಹಾಲು ನೀಡಿ, ಎರಡೇ ಎರಡು ವರುಷಗಳಲ್ಲಿ ಸಾಲವನ್ನೂ ತೀರಿಸಿ ಮತ್ತೂ ಒಂದು ಹಸುವನ್ನು ಕೊಂಡುಕೊಂಡರು.

ಮಾಸ್ತ್ರ ನಿವೃತ್ತ ಜೀವನ ಈ ರೀತಿ ಯಾವುದೇ ಏರಿತಳಿತಗಳಿಲ್ಲದೆ ಅದರ ಪಾಡಿಗೆ ಅದು ಎಂಬಂತೆ ನಡೆಯುತ್ತಿತ್ತು. ಈ ನಡುವೆ ಅದೊಂದು ಬೆಳಗ್ಗೆ ಅವರಿಗೆ ಎಂದಿನಂತೆ ಚಾಪೆ ಬಿಟ್ಟು ಏಳಲು ಆಗಲಿಲ್ಲ. ಬೆನ್ನಿನ ಕೆಳಭಾಗದಲ್ಲಿ ಚೂರಿಯಲ್ಲಿ ಚುಚ್ಚಿದಂತೆ ಅಥವಾ ದೊಣ್ಣೆಯಲ್ಲಿ ಹೊಡೆದಂಥ ನೋವು ಕಾಣಿಸಿಕೊಂಡಿತು. ಅವರು ಬಳಿಯಲ್ಲಿದ್ದ ಹೆಂಡತಿ ನೀಲಮ್ಮನ ಸಹಾಯದಿಂದ ಎದ್ದು ಕುಳಿತು 'ನೀಲs ಈ ದಿನ ನನ್ನಿಂದ ಹಾಲು ಹಿಂಡುವುದು ಸಾಧ್ಯವಿಲ್ಲ. ಡೈರಿಗೆ ಹಾಲು ಹಾಕುವುದೂ ಸಾಧ್ಯವಿಲ್ಲ' ಎಂದು ಕೈಚೆಲ್ಲಿದರು. ನೀಲಮ್ಮನಿಗೆ ಗಾಬರಿಯಾಯಿತು. ಅವರು ಪ್ರಯಾಸಪಟ್ಟು ಗಂಡನನ್ನು ಎದ್ದು ನಿಲ್ಲಿಸಿ ನಿತ್ಯಕರ್ಮಗಳನ್ನು ಮಾಡಿಸಿ ಚಾವಡಿಯಲ್ಲಿದ್ದ ಕುರ್ಚಿಯಲ್ಲಿ ಕೂಡಿಸಿ 'ನೀವೇನೂ ಗಾಬರಿಪಡಬೇಡಿ. ನಾನು ಮೊದಲು ಹಟ್ಟಿಗೆ ಹೋಗಿ ನೀವು ಮಾಡುವ ಕೆಲಸಗಳನ್ನೆಲ್ಲ ಮಾಡಿ ಮುಗಿಸುತ್ತೇನೆ. ಆ ಮೇಲೆ ನಿಮಗೆ ಚಹಾ ಮಾಡಿ ಕೊಟ್ಟು ಡೈರಿಗೆ ಹಾಲು ಹಾಕಿ ಬರುತ್ತೇನೆ' ಎಂದು ಸೊಂಟಕ್ಕೆ ಸೆರಗು ಬಿಗಿದು ಹಟ್ಟಿಗೆ ನಡೆದರು. ಆ ಮೇಲೆ ರಾಸುಗಳಿಗೆ ಹಿಂಡಿ ನೀರು ಕೊಟ್ಟು ಹಾಲು ಕರೆದು, ಗಂಡನಿಗೆ ಚಹಾ ಮಾಡಿಕೊಟ್ಟು ದೊಡ್ಡ 'ಕೇಟ್ಲ'ನಲ್ಲಿ (ಕ್ಯಾನಿನಲ್ಲಿ) ಐದು ಲೀಟರ್ ಹಾಲನ್ನು ತುಂಬಿ ಡೈರಿಗೆ ಹಾಕಲು ಹೊರಟು ನಿಂತರು.

ದಗ್ಗೋಜಿ ಮಾಸ್ತ್ರಿಗೆ ಆತಂಕವಾಯಿತು. ಐದು ಲೀಟರ್ ಹಾಲನ್ನು ಈಕೆ ಅಷ್ಟು ದೂರ ಕೊಂಡೊಯ್ಯಲು ಸಾಧ್ಯವೇ? ಎಂದುಕೊಂಡ ಅವರು ಆಕೆಯನ್ನು ತಡೆದು 'ನನ್ನ ಶಿಷ್ಯ ವಿಜಯನಿಗೆ ಫೋನು ಮಾಡುತ್ತೇನೆ, ನಿಲ್ಲು, ಅವನು ರಿಕ್ಷಾದಲ್ಲಿ ಹಾಲು ಕೊಟ್ಟು ಬರಲಿ ಬಿಡು' ಎಂದರು.

ನೀಲಮ್ಮ ಮುಗುಳ್ನಗುತ್ತಾ, 'ನಾನು ಅಷ್ಟು ದುರ್ಬಲಳು ಅಂದುಕೊಳ್ಳಬೇಡಿ ನೀವು! ನಾನು ಬೇಗ ಹೋಗಿ ಬೇಗ ಬರುತ್ತೇನೆ ನೋಡಿ' ಎಂದು ಹಟ ಹಿಡಿದರು. ಅಷ್ಟರಲ್ಲಿ ದುಗ್ಗೋಜಿ ಮಾಸ್ತ್ರು ರಿಕ್ಷಾದ ವಿಜಯನಿಗೆ ಫೋನು ಮಾಡಿ ಆಗಿತ್ತು. ಆ ಕಡೆಯಿಂದ ಆತ 'ನಾನು ಸೀತಾಪುರದಲ್ಲಿ ಇಲ್ಲ ಸರ್. ನನ್ನ ಹೆಂಡತಿಯ ತವರು ಮನೆ ಕಿನ್ನಿಗೋಳಿಗೆ ಬಂದಿದ್ದೇನೆ' ಎಂದ.

ದುಗ್ಗೋಜಿ ಮಾಸ್ತರಲ್ಲಿ ಸ್ಮಾರ್ಟ್ ಫೋನ್ ಇರಲಿಲ್ಲ. ಅವರು ಲ್ಯಾಂಡ್‌ಲೈನ್ ಫೋನನ್ನೇ ಅವಲಂಬಿಸಿದ್ದರು. ಅವರ ಒಬ್ಬ ಶಿಷ್ಯ ಅಂತೋನಿ ಪರ್ಬು ಕಳೆದ ವರುಷ ದುಬಾಯಿಯಿಂದ ಬರುವಾಗ 'ಗುರುಗಳಿಗೆ ಇರಲಿ' ಒಂದು ಸ್ಮಾರ್ಟ್ ಫೋನ್ ತಂದು ಅವರಿಗೆ ಒಪ್ಪಿಸಿದ್ದ. ಪರ್ಬು ಎಷ್ಟು ಒತ್ತಾಯಿಸಿದರೂ ಮಾಸ್ತ್ರು ಫೋನನ್ನು ಸ್ವೀಕರಿಸಿರಲಿಲ್ಲ. ಅದರ ಮೊದಲು ಬಡುವ ಕುಞ್ಞ



ಬ್ಯಾರಿಯ ಮಗನೂ ಮಸ್ಕತ್‌ನಿಂದ ಬಂದವನು ಮಾಸ್ತ್ರಿಗೆ ಇದೇ ರೀತಿ ಉಚಿತವಾಗಿ ಫೋನು ನೀಡಲು ಮುಂದೆ ಬಂದದ್ದನ್ನು ಅವರು ಪರ್ಬುವಿಗೆ ಹೇಳಿದ್ದರು. ಆಗ ಅವನು 'ನೀವು ಉಚಿತವಾಗಿ ಫೋನು ತೆಗೆದುಕೊಳ್ಳುವುದೇ ಇಲ್ಲವೆಂದಾದರೆ, ಇದರ ಮೌಲ್ಯವನ್ನು ನಿಧಾನವಾಗಿ ನನಗೆ ಕೊಡಿ. ನಿಮ್ಮಂಥವರಿಗೆ ಈ ಕಾಲದಲ್ಲಿ ಸ್ಮಾರ್ಟ್ ಫೋನ್ ಇಲ್ಲವಾದರೆ ನೀವು ಈ ಕಾಲದವರಲ್ಲ ಅಂತ ಆಗುತ್ತದೆ ಸರ್!' ಎಂದು ಒತ್ತಾಯಿಸಿದ್ದ. ಮಾಸ್ತ್ರು ಅದಕ್ಕೆ 'ನಾನು ಈ ಕಾಲದವನು ಅಲ್ಲ ಅಂತಲೇ ಇಟ್ಟುಕೋ ಮಾರಾಯ' ಎಂದು ಅವನನ್ನು ಕಳುಹಿಸಿಕೊಟ್ಟಿದ್ದರು.

ಈ ಇಬ್ಬರು ಶಿಷ್ಯರೂ ಸಾಂದರ್ಭಿಕವಾಗಿ ಈ ವಿಚಾರವನ್ನು ಸೀತಾಪುರದ ಕುಪ್ಪಣ್ಣಯ್ಯನವರ ಹೋಟೆಲಿನಲ್ಲಿ ತಾವು ಚಹಾ ಸೇವಿಸುವ ಹೊತ್ತಿನಲ್ಲಿ